9. ಹೆಣ್ಣುಮಕ್ಕಳ ಶಿಕ್ಷಣಕ್ಕೆ ಎಲ್ಲಾ ರೀತಿಯಿಂದಲೂ ಹೆಚ್ಚಿನ ಆದ್ಯತೆ ನೀಡಿ, ಶಾಲೆ ಬಿಟ್ಟ ಮಕ್ಕಳನ್ನು ಅನೌಪಚಾರಿಕ ಕೇಂದ್ರದಲ್ಲಿ 6 ವರ್ಷದಿಂದ 14 ವರ್ಷದ ಮಕ್ಕಳನ್ನು ಅನೌಪಚಾರಿಕ ಶಿಕ್ಷಣ ಕೇಂದ್ರಕ್ಕೆ ಕಡ್ಡಾಯವಾಗಿ ಕಳುಹಿಸಲು ಪ್ರೋತ್ಸಾಹಿಸುವುದು. 15 ರಿಂದ 35 ವರ್ಷ ವಯೋಮಿತಿಯಲ್ಲಿರುವ ಅನಕ್ಷರಸ್ಥರಾಗಿರುವವರನ್ನು ವಯಸ್ಕರ ಶಿಕ್ಷಣದಡಿಯಲ್ಲಿ ಕಡ್ಡಾಯವಾಗಿ ಕಲಿಯಲು ಪ್ರೋತ್ಸಾಹಿಸುವುದು.

10. ಶಾಲಾ-ಸಂಕೀರಣದಲ್ಲಿ ಶಾಲಾ ಉಪಾಧ್ಯಾಯರುಗಳು ತಪ್ಪದೇ ಭಾಗವಹಿಸುವಂತೆ ಮಾಡಿ ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚಿನ ಜ್ಞಾನ ಪಡೆಯುವಂತೆ ವ್ಯವಸ್ಥೆ ಮಾಡುವುದು.

11. ಶೈಕ್ಷಣಿಕ ಸಮಿತಿಯ ನಿಧಿಯನ್ನು ಮುಖ್ಯ ಶಿಕ್ಷಕರು ಹಾಗೂ ಅಧ್ಯಾಪಕರ ಜಂಟಿ ಖಾತೆಯಲ್ಲಿ ಇಡತಕ್ಕದ್ದು. ಒಂದು ಸಾವಿರ ರೂ. ಒಳಗೆ ಶೈಕ್ಷಣಿಕ ಸಮಿತಿ ತೀರ್ಮಾನಿಸಿ ಖರ್ಚು ಮಾಡುವುದು.

ಆ) ಹೌದು.

ಇ) ಶಾಲಾಭಿವೃದ್ಧಿ ಸಮಿತಿಯಲ್ಲಿ ಶಾಲಾ ಮುಖ್ಯೋಪಾಧ್ಯಾಯರು, ಕಾರ್ಯದರ್ಶಿ ಆಗಿರುತ್ತಾರೆ. ಶಾಲಾಭಿವೃದ್ಧಿ ಸಮಿತಿಗೆ ನೀಡುವ ದೇಣಿಗೆ ಹಾಗೂ ಖರ್ಚು ಲೆಕ್ಕವನ್ನು ಪ್ರತ್ಯೇಕವಾಗಿ ಮುಖ್ಯೋಪಾಧ್ಯಾಯರು, ಕಾರ್ಯದರ್ಶಿಯವರೇ ನಿರ್ವಹಿಸುತ್ತಾರೆ ಹಾಗೂ ಶಾಲಾಭಿವೃದ್ಧಿ ಸಮಿತಿಯ ನಿಧಿಯನ್ನು ಶಾಲಾ ಮುಖ್ಯ ಶಿಕ್ಷಕರು ಮತ್ತು ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರು ಜಂಟಿ ಖಾತೆಯಲ್ಲಿ ಬ್ಯಾಂಕ್‌ನಲ್ಲಿ ಇಡಬೇಕು. ಒಂದು ಸಾವಿರ ರೂ. ಒಳಗೆ ಶೈಕ್ಷಣಿಕ ಸಮಿತಿ ತೀರ್ಮಾನಿಸಿ ಖರ್ಚು ಮಾಡಬಹುದಾಗಿದೆ. ಈ ಹಣಕ್ಕೆ ಹೆಚ್ಚು ಮೇಲ್ಪಟ್ಟು ಖರ್ಚು ಮಾಡಬೇಕಾಗಿದ್ದಲ್ಲಿ ಉಪನಿರ್ದೇಶಕರ ಮೂಲಕ ಜಿಲ್ಲಾ ಪಂಚಾಯತ್ ಅನುಮೋದನೆ ಪಡೆಯಬೇಕಾಗಿದೆ. ಈ ನಿಧಿಯಿಂದ ಖರ್ಚು - ವೆಚ್ಚಗಳ ಎಲ್ಲಾ ಲೆಕ್ಕಪತ್ರಗಳನ್ನು ಸಮರ್ಪಕವಾಗಿ ಮುಖ್ಯೋಪಾಧ್ಯಾಯರು ಕಾರ್ಯದರ್ಶಿಯವರು ನಿರ್ವಹಿಸುತ್ತಾರೆ.

ಅನುದಾನಿತ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳ ತೆರೆವಾದ ಶಿಕ್ಷಕರ ಹುದ್ದೆ

2212 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಅನುದಾನಿತ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ತೆರವಾದ ಶಿಕ್ಷಕೇತರ ಹುದ್ದೆಯನ್ನು ಭರ್ತಿ ಮಾಡಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಆ) ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇದೆ? (ವಿವರ ನೀಡುವುದು)

ಇ) ಖಾಲಿಯಾದ ಹುದ್ದೆಗಳನ್ನು ಭರ್ತಿಮಾಡಲು ಸರ್ಕಾರವು ಯಾವಾಗ ಆದೇಶ ಹೊರಡಿಸುವುದು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು.) :

ಅ) ಅನುದಾನಿತ ಪ್ರೌಢಶಾಲೆಗಳ ಪದವಿ ಪೂರ್ವ ಕಾಲೇಜುಗಳ ಬೋಧಕ : ಬೋಧಕೇತರ ನೇಮಕಾತಿಯನ್ನು ಆಡಳಿತ ಮಂಡಳಿಗಳು ಮಾಡುತ್ತವೆ. ಸರ್ಕಾರ ಭರ್ತಿ ಮಾಡುವುದಿಲ್ಲ. ಆದರೆ ಸರ್ಕಾರವು ಪ್ರತಿ ಅನುದಾನಿತ ಪ್ರೌಢಶಾಲೆಗೆ ಹಾಗೂ ಪದವಿ ಪೂರ್ವ ಕಾಲೇಜಿಗೆ ಕನಿಷ್ಟ ಒಂದು ಬೋಧಕೇತರ ಹುದ್ದೆಗೆ ಅನುದಾನ ನೀಡಬೇಕೆಂಬ ಆಧಾರದ ಮೇಲೆ ಯಾವುದೇ ಬೋದಕೇತರ ಸಿಬ್ಬಂದಿ ಇಲ್ಲದಿರುವ ಅನುದಾನಿತ ಪ್ರೌಢಶಾಲೆ ಪದವಿ ಪೂರ್ವ ಕಾಲೇಜುಗಳಲ್ಲಿ ನೇಮಕಮಾಡಿಕೊಳ್ಳುವ ಒಂದು ಅಲಿಪಿಕ ಸಿಬ್ಬಂದಿಯನ್ನು ಅನುದಾನಕ್ಕೆ ಒಳಪಡಿಸಲಾಗುವುದು. ದಿನಾಂಕ : 1-1-90ರ ಹಿಂದೆ ನೇಮಕ ಹೊಂದಿ ಅನುಮೋದನೆ ಪಡೆದ ಅನುದಾನಿತ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಒಟ್ಟಾರೆ 470 ಹುದ್ದೆಗಳನ್ನು ಹಾಗೂ 310 ಹುದ್ದೆಗಳನ್ನು ಮಾನವೀಯ ದೃಷ್ಟಿಯಿಂದ ಅನುದಾನಕ್ಕೆ ಒಳಪಡಿಸಲು ಆದೇಶಿಸಲಾಗಿದೆ.

ಆ) ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಇ) ಆಡಳಿತ ಮಂಡಳಿಗಳು ನೇಮಕಾತಿ ಪ್ರಾಧಿಕಾರವಾಗಿರುವುದರಿಂದ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವುದೇ ಕ್ರಮ ಕೈಗೊಳ್ಳಲಾಗುವುದಿಲ್ಲ. ಆರ್ಥಿಕ ಮಿತವ್ಯಯ ಆದೇಶವಿರುವ ಕಾರಣ ಯಾವುದೇ ಬೋದಕೇತರ ಸಿಬ್ಬಂದಿ ಇಲ್ಲದಿರುವ ಅನುದಾನಿತ ಪದವಿ ಪೂರ್ವ ಕಾಲೇಜು ಶಾಲೆಯಲ್ಲಿ ಒಂದು ಲಿಪಿಕ ಹುದ್ದೆಯನ್ನು ಮಾತ್ರ ಅನುದಾನಕ್ಕೆ ಒಳಪಡಿಸಲು ಅವಕಾಶವಿದ್ದು ಅದರಂತೆ ಆಡಳಿತ ಮಂಡಳಿಗಳು ನಿಯಮಾನುಸಾರ ನೇಮಕಾತಿ ಮಾಡಿಕೊಂಡಲ್ಲಿ ಅನುಮೋದನೆ ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

ಅನುಬಂಧ - 1

ರಾಜ್ಯದಲ್ಲಿರುವ ಅನುದಾನಿತ ಪ್ರೌಢ ಶಾಲೆ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿಯಿರುವ ಶಿಕ್ಷಕೇತರರ ಹುದ್ದೆಗಳ ಜಿಲ್ಲಾವಾರು ಪಟ್ಟಿ

ಕ್ರಮ. ಸಂ.	ಜಿಲ್ಲೆಯ ಹೆಸರು	ಪ್ರೌಢಶಾಲೆಗಳು	ಪದವಿ ಪೂರ್ವ ಕಾಲೇಜುಗಳು
1	2	3	4
1)	ಬೆಂಗಳೂರು ಉತ್ತರ	81	03
2)	ಬೆಂಗಳೂರು ದಕ್ಷಿಣ	47	-
3)	ಬೆಂಗಳೂರು ಗ್ರಾಮಾಂತರ	4	-
4)	ಕೋಲಾರ	31	07
5)	ತುಮಕೂರು	88	31

1	2	3	4
6)	ಶಿವಮೊಗ್ಗ	52	-
7)	ಚಿತ್ರದುರ್ಗ	104	05
8)	ಮೈಸೂರು	538	-
9)	ಮಂಡ್ಯ	88	-
10)	ಹಾಸನ	125	-
11)	ಚಿಕ್ಕಮಗಳೂರು	59	04
12)	ಕೊಡಗು	37	-
13)	ದಕ್ಷಿಣ ಕನ್ನಡ	225	02
14)	ಬೆಳಗಾಂ	149	35
15)	ಬಿಜಾಪುರ	31	44
16)	ಧಾರವಾಡ	226	87
17)	ಉತ್ತರ ಕನ್ನಡ	114	13
18)	ಗುಲ್ಬರ್ಗಾ	43	15
19)	ಬಳ್ಳಾರಿ	43	-
20)	ರಾಯಚೂರು	53	-
21)	ಬೀದರ್	25	-
	ಒಟ್ಟು	**2163**	**246**

7ನೇ ತರಗತಿ ಪಬ್ಲಿಕ್ ಪರೀಕ್ಷಾ ಕಾರ್ಯಕ್ಕೆ ಶಿಕ್ಷಕೇತರರಿಗೆ ಸಂಭಾವನೆ

2213 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 7ನೇ ತರಗತಿಯ ಪಬ್ಲಿಕ್ ಪರೀಕ್ಷಾ ಕಾರ್ಯಕ್ಕೆ ಎಸ್ಎಸ್ಎಲ್ಸಿ ಪರೀಕ್ಷಾ ದರದಲ್ಲಿ ಸೂಕ್ತ ಸಂಭಾವನೆ ಮತ್ತು ಶಿಕ್ಷಕೇತರರ ನೇಮಕಾತಿ ಮಾಡಲಾಗಿದೆಯೇ?